



**ಎಡದಿಂದ ಬಲಕ್ಕೆ**

1. ದಾಸಯ್ಯನನ್ನು ಕಂಡರೇ ಅಲ್ಲಿ ಎಲ್ಲರಿಂದಲೂ ತಿರಸ್ಕಾರ 4
3. ಅರ್ಧ ದಾರಿಯಲ್ಲಿ ಎದುರಾದ ಅಪಾಯಕ್ಕೆ ಹೆದರಿ ನಡುಕ 3
4. ಕಾಣಲಿಕ್ಕೆ ಸಿಕ್ಕಿದ್ದು ಅತ್ಯಲ್ಪ ಕಾಲದ್ದು 3
6. ಈ ಸಂಪತ್ತಿನಲ್ಲಿ ಎಲ್ಲರಿಗೂ ಹೆಚ್ಚು ಕಡಿಮೆ ಇಲ್ಲದಂತೆ ಭಾಗ 4
7. ಕೋತಿಯನ್ನು ಸಾಕಿದ್ದರ ಕುರಿತು ಕಥೆಯಂತೆ ದೀರ್ಘ ವಿವರಣೆ 4
9. ಪ್ರಕೃತಿಯ ಸಹಸ್ರಾರು ರುಚಿಗಳಿಗೂ ಮೂಲ ಇದೇ ಭೂಮಿಯೇ ತಾನೇ? 4
12. ಆರಿಸುವ ಕಾರ್ಯದಲ್ಲಿ ಇಂಥ ಗಡಿಬಿಡಿ ಏಕೆ? 4
14. ಮುರುಕು ಗಾಡಿಯ ಮರೆಯಲ್ಲಿ ಮೊಸಳೆ ಹಿಂದುಮುಂದು 3
15. ಸಮಸ್ತ ಕೆಲಸಗಳ ಮೂಲ ನಿಯಂತ್ರಕ ಇದೇ ತಲೆ 3
16. ಪದ್ಧತಿಯ ಪ್ರಕಾರ ಆಕೆಯೇ ಆಗಿದ್ದಾಳೆ ಸೇನೆಯ ಒಡತಿ 4

**ಮೇಲಿನಿಂದ ಕೆಳಕ್ಕೆ**

1. ಆ ಊರಿನವರೆಲ್ಲರೂ ಬಳಸುವುದು ಒಂದೇ ಬಗೆಯ ಇಂಧನ 4
2. ನಕ್ಷತ್ರ ಲೋಕಕ್ಕೇ ಹೋದರೂ ಬಿಡದೆ ಬಾಕಿಗಾಗಿ ಪೀಡಿಸುವವ 4
3. ಎಲ್ಲದರಲ್ಲೂ ದುರ್ಮಾರ್ಗವನ್ನೇ ಅನುಸರಿಸುತ್ತಾನೆ ಈ ಕೀಳು ಮನುಷ್ಯ 3
5. ಕುದುರೆಯನ್ನೇರಿ ಬಂದವನೊಡನೆ ಇದೆಂಥ ಯುದ್ಧ? 3
6. ಸಾಗರವನ್ನು ನೋಡ ಹೊರಟಿದ್ದಕ್ಕೆ ಇಷ್ಟೊಂದು ಸಂಭ್ರಮ 4
8. ಕೊಳ್ಳಬರುವ ಎಲ್ಲರದೂ ಒಂದೇ ಬಗೆಯ ಶರೀರ 4
10. ಸಂಗೀತ ಸ್ವರ ಜ್ಞಾನವೇ ಇಲ್ಲದವರು ಅಲ್ಲಿ ಹತ್ತು ನೂರು 3
11. ಅಲ್ಲಿ ಹಣ್ಣು ಮಾರುವವನದು ದುಡ್ಡಿನ ಸೊಕ್ಕು, ಗರ್ವ 4
12. ಹನುಮನ ಮೂರ್ತಿಯನ್ನು ಸ್ಥಾಪಿಸಲು ಒಪ್ಪಿಗೆ ಸಿಕ್ಕಿದೆ 4
13. ಎಂಟಕ್ಕೆ ಅಷ್ಟಕ, ಹತ್ತಕ್ಕೆ ದಶಕ. ಹಾಗೆಯೇ ಏಳಕ್ಕೆ ...? 3

## 05—06—2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಭಾವ 3. ಪರೋಕ್ಷ 4. ದಶಕ 6. ಪರಿಕರ 7. ಮಾನಧನ 9. ನವನೀತ 11. ಅಪಕಾರ 15. ವಸನ 16. ರುಧಿರ 17. ಕಠಿಣ

**ಮೇಲಿನಿಂದ ಕೆಳಕ್ಕೆ**

1. ಅಕ್ಷಮ್ಯ 2. ವದನ 3. ಪದಕ 5. ಕವನ 6. ಪತನ 8. ನಕಾರ 10. ನೀರವ 12. ಪದರ 13. ಕನಕ 14. ವರುಣ

**ಪ್ರಶ್ನಾಂಕಣ**

# ಗಿಬ್ಬನ್: ಎಷ್ಟು ವೈವಿಧ್ಯ? ಏನು ವೈಶಿಷ್ಟ್ಯ?


ಗಿಬ್ಬನ್: ಅದೊಂದು ವಾನರ (ಏಪ್). ಹಾಗೆಂದರೆ ಪ್ರಸಿದ್ಧ ವಾನರರಾದ ಗೊರಿಲ್ಲ, ಚಿಂಪಾಂಜಿ, ಬೋನೋಬೋ ಮತ್ತು ಒರಾಂಗೊಟಾನ್‌ಗಳ ಗುಂಪಿಗೇ ಗಿಬ್ಬನ್ ಕೂಡ ಸೇರಿದೆ. ಹಾಗಿದ್ದರೂ ಕೆಲವು ಗುಣಲಕ್ಷಣಗಳಲ್ಲಿ ಅವು ಉಳಿದೆಲ್ಲ ವಾನರರಿಂದ ವಿಭಿನ್ನವಾಗಿವೆ. ಪ್ರಮುಖವಾಗಿ ಗಿಬ್ಬನ್‌ಗಳದೇ ತುಂಬ ಪುಟ್ಟ ಗಾತ್ರ ಮತ್ತು ಅತ್ಯಂತ ಕಡಿಮೆ ತೂಕ (ಅವುಗಳ ತೂಕ 5 ರಿಂದ 7 ಕಿಲೋ). ಇವುಗಳಲ್ಲಿ ಗಂಡು ಮತ್ತು ಹೆಣ್ಣುಗಳ ನಡುವೆ ಗಾತ್ರಾಂತರವಿಲ್ಲ. ಮತ್ತು ಪ್ರತಿ ರಾತ್ರಿ ನಿದ್ರಿಸಲು ಗಿಬ್ಬನ್‌ಗಳು ಇತರ ವಾನರರಂತೆ 'ಎಲೆಗಳ ಮೆತ್ತನೆಯ ಹಾಸಿಗೆ'ಯನ್ನು ನಿರ್ಮಿಸುವುದಿಲ್ಲ.

ಪ್ರಸ್ತುತ ಗಿಬ್ಬನ್‌ಗಳಲ್ಲಿ 20 ಪ್ರಭೇದಗಳಿವೆ (ಕೆಲ ಪ್ರಭೇದಗಳನ್ನು ಚಿತ್ರಗಳಲ್ಲಿ ಗಮನಿಸಿ). ಏಷ್ಯಾದ ಭಾರತ, ಬಾಂಗ್ಲಾ ದೇಶ ಮತ್ತು ಮಯನ್ಮಾರ್‌ಗಳಲ್ಲಿ ಹಾಗೂ ಆಗ್ನೇಯ ಏಷಿಯದ ಇಂಡೊನೇಷ್ಯಾ, ಜಾವಾ, ಸುಮಾತ್ರಾ ಮತ್ತು ಬೋರ್ನಿಯೋಗಳಲ್ಲಿ ಗಿಬ್ಬನ್‌ಗಳ ಅಸ್ತಿತ್ವ. ಈ ಪ್ರದೇಶಗಳ ನಿಬಿಡ ಅಡವಿಗಳಲ್ಲಿ, ವೃಕ್ಷಗಳ ಉನ್ನತ ಸ್ತರಗಳಲ್ಲಿ ಅವುಗಳ ವಾಸ. ನಮ್ಮ ದೇಶದ ಈಶಾನ್ಯದ ಏಳು ರಾಜ್ಯಗಳಲ್ಲಿ (ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್ ಮತ್ತು ತ್ರಿಪುರ) ಗಿಬ್ಬನ್‌ಗಳು, ವಿಶೇಷವಾಗಿ 'ಹೂಲಾಕ್ ಗಿಬ್ಬನ್‌ಗಳು' ಕಾಣಸಿಗುತ್ತವೆ.

ಇವುಗಳ ಆಹಾರ ಹಣ್ಣುಗಳು, ಚಿಗುರೆಲೆಗಳು ಮತ್ತು ಕೀಟಗಳು. ತಮ್ಮ ಉದ್ದನೆಯ ತೋಳುಗಳ ಮೇಲೆ ತೂಗಾಡುತ್ತ ವೃಕ್ಷಗಳ ಮೇಲೆ ಅವುಗಳ ಓಡಾಟ. ಈ ಕ್ರಮದಲ್ಲೇ ಅವು ತಾಸಿಗೆ 50 ಕಿ.ಮೀ. ವೇಗದಲ್ಲಿ ಚಲಿಸಬಲ್ಲವು! ವಿಪರೀತ ಉದ್ದದ ತೋಳುಗಳಿಂದಾಗಿಯೇ ಗಿಬ್ಬನ್‌ಗಳಿಗೆ ನೆಲದ ಮೇಲೆ ನಡೆದಾಟ ಸುಲಭವಲ್ಲ. ಅದಕ್ಕೇ ಗಿಬ್ಬನ್‌ಗಳು ನೆಲಕ್ಕೆ ಇಳಿದು ಬರುವುದೇ ಅಪರೂಪ. ಹಾಗೆ ಬಂದಾಗಲೂ ಅವು ತಮ್ಮ ಎರಡೂ ತೋಳುಗಳನ್ನು ಮೇಲಕ್ಕೆ ಎತ್ತಿ ಹಿಡಿದು ವಕ್ರ ವಕ್ರವಾಗಿ ನಡೆಯುತ್ತವೆ.

ಪ್ರತಿ ಕುಟುಂಬದ ಗಿಬ್ಬನ್‌ಗಳೂ ಬೆಳಗಾದೊಡನೆ ವೃಕ್ಷ ಚಾವಣಿಯಲ್ಲಿ ಚದುರಿ ಆಹಾರಾನ್ವೇಷಣೆ ನಡೆಸುತ್ತವೆ. ಆಗಾಗ ಜೋರಾಗಿ ಕೂಗುತ್ತ ಒಂದರೊಡನೊಂದು ಸಂಪರ್ಕದಲ್ಲಿರುತ್ತವೆ ಹಾಗೂ ತನ್ಮೂಲಕವೇ ಇತರ ಕುಟುಂಬಗಳಿಗೆ ತಮ್ಮ ಸರಹದ್ದನ್ನು ಘೋಷಿಸುತ್ತವೆ. ಜೀವನ ಪೂರ್ತಿ ಏಕ ಪತಿ/ಪತ್ನೀವ್ರತಸ್ಥರಾಗಿರುವುದೂ ಗಿಬ್ಬನ್‌ಗಳ ವೈಶಿಷ್ಟ್ಯ. ಏಳು ತಿಂಗಳುಗಳ ಗರ್ಭ ವಾಸದ ನಂತರ ಜನಿಸುವ ಮರಿ ಎಂಟು ಒಂಬತ್ತು ವರ್ಷಗಳಲ್ಲಿ ಪ್ರೌಢವಾಗುತ್ತದೆ. ಗಿಬ್ಬನ್‌ಗಳ ಗರಿಷ್ಠ ಆಯುಷ್ಯ 25 ವರ್ಷ.

ಇವುಗಳ ಎಲ್ಲ ಪ್ರಭೇದಗಳೂ ಅಳಿವ ಅಪಾಯದಲ್ಲಿವೆ; ಅಲ್ಪಸಂಖ್ಯಾತರಾಗಿವೆ. ಕೆಲ ಪ್ರಭೇದಗಳಂತೂ ಬೆರಳೆಣಿಕೆ ಸಂಖ್ಯೆಯಲ್ಲಿವೆ. ಪ್ರಸ್ತುತ ಎಲ್ಲ ಗಿಬ್ಬನ್ ಪ್ರಭೇದಗಳ ಒಟ್ಟು ಜನಸಂಖ್ಯೆ ಹನ್ನೆರಡು ಸಾವಿರ! ಅವುಗಳ ಆವಾಸ ಪ್ರದೇಶಗಳಲ್ಲಿ ವೃಕ್ಷಗಳು ಕಗ್ಗೊಲೆಗೊಂಡು ಅಡವಿಗಳು ಕ್ಷಿಪ್ರವಾಗಿ ಕ್ಷೀಣಿಸುತ್ತಿರುವುದೇ ಈ ದುಸ್ಥಿತಿಗೆ ಪ್ರಮುಖ ಕಾರಣ.




■ ಎನ್. ವಾಸುದೇವ್